ಚಾಸಾ.1, ಪಿ.ಡಬ್ಲ್ಯೂ-1

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳ ನ್ಯಾಯಾಲಯ, ಹೊಸಪೇಟೆ.
ಸಾಕ್ಷಿಯನ್ನು ದಿನಾಂಕ 03-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲು- ಆರೋಪಿತರ ಪರ ವಕೀಲರಾದ ಶ್ರೀ ಜಿವಿಪಿ ರವರಿಂದ-

ನನಗೂ ಮತ್ತು ಸೋಮನಾಥ ರವರಿಗೂ ಈ ಪ್ರಕರಣದ ಪ್ರಾಥಮಿಕ ತನಿಖೆ ನಡೆಸಲು ಯಾವುದೇ ಅಧಿಕಾರ ಪತ್ರ ಕೊಟ್ಟಿಲ್ಲ, ಹಾಗೂ ನಾನು ಅದನ್ನು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ-7ರ ಜಪ್ತು ಪಂಚನಾಮೆಯನ್ನು ಜರುಗಿಸುವಾಗ ಕೆಲವು ದಾಖಲೆಗಳನ್ನು ಪೊಲೀಸರು ಜಪ್ತು ಪಡಿಸಿಕೊಂಡಿರುತ್ತಾರೆ ಎಂದು ಹೇಳಿದ್ದು, ಸದರಿ ಪಂಚನಾಮೆಯಲ್ಲಿ ಹೀಗೆ ಜಪ್ತು ಪಡಿಸಿಕೊಂಡಿರುತ್ತಾರೆ ಎಂದು ಹೇಳಲಾದ ದಾಖಲೆಗಳು ಯಾವ ಅಧಿಕಾರಿಯ ಬಳಿ ಇತ್ತು ಎಂಬ ಬಗ್ಗೆ ಹಾಗೂ ಆ ಅಧಿಕಾರಿಯ ಸಹಿಯನ್ನು ಅದರಲ್ಲಿ ತೆಗೆದುಕೊಳ್ಳಲಾಗಿದೆಯೇ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇಲ್ಲ ನಾನು ಚೀಫ್ ಮಾನೇಜರ್ ಆಗಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪ್ರಾಥಮಿಕ ತನಿಖೆ ಮಾಡುವ ಸಮಯದಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ನನ್ನ ಸ್ವಾಧೀನಕ್ಕೆ ತೆಗೆದುಕೊಂಡಿರುತ್ತೇನೆ. ನನ್ನ ಪ್ರಾಥಮಿಕ ತನಿಖೆಯಲ್ಲಿ ಯಾರ ಸ್ವಾಧೀನದಲ್ಲಿ ಇದ್ದ ದಾಖಲೆಗಳನ್ನು ನನ್ನ ಸ್ವಾಧೀನಕ್ಕೆ ತೆಗೆದುಕೊಂಡಿರುತ್ತೇನೆ ಎಂಬ ಬಗ್ಗೆ ನಮೂದು ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಹೀಗೆ ದಾಖಲೆಯನ್ನು ಯಾವ ಬ್ಯಾಂಕಿನ ಅಧಿಕಾರಿಯಿಂದ ಪಡೆದಿರುತ್ತೇನೋ ಅವರಿಗೆ ಅದರ ಬಗ್ಗೆ ಹಿಂಬರಹ ಕೊಟ್ಟಿಲ್ಲ ಹಾಗೂ ಅದರ ಅವಶ್ಯಕತೆ ಇರುವುದಿಲ್ಲ. ಹೀಗೆ ಪಡೆದ ದಾಖಲೆಗಳ ಮೇಲೆ ನಾನು ಹಾಗೂ ನನ್ನ ಸಹ ಪ್ರಾಥಮಿಕ ತನಿಖಾಧಿಕಾರಿಯಾದ ಸೋಮನಾಥರವರು ನಮ್ಮ ಸಹಿಗಳನ್ನು ಮಾಡಿಲ್ಲ ಆದರೆ ಅದರ ಪಟ್ಟಿಯನ್ನು ತಯಾರಿಸಿರುತ್ತೇವೆ. ನಾವು ಪ್ರಾಥಮಿಕ ತನಿಖೆ ಸಮಯದಲ್ಲಿ ಪಡೆದ ಎಲ್ಲಾ ದಾಖಲೆಗಳನ್ನು ಸದರಿ ತನಿಖೆಯ ವರದಿಯ ಜೊತೆಗೆ ಲಗತ್ತಿಸಿ, ನಮ್ಮ ಹಿರಿಯ ಅಧಿಕಾರಿಗೆ ಕೊಟ್ಟಿರುತ್ತೇವೆ. ಆ ಕುರಿತು ನಮ್ಮ ಹಿರಿಯ ಅಧಿಕಾರಿಗಳಿಂದ ಸ್ವೀಕೃತಿ ಪಡೆದಿಲ್ಲ. ಸಾಕ್ಷಿ ಮುಂದುವರೆದು, ಸದರಿ ವರದಿಯ ಮೂಲ ಪ್ರತಿಯನ್ನು ಪೊಲೀಸರಿಗೆ ಕೊಟ್ಟು, ಅದರ ನಕಲು ಪ್ರತಿಯನ್ನು ಹಿರಿಯ ಅಧಿಕಾರಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಈ ರೀತಿ ವರದಿಯ ಮೂಲ ಪ್ರತಿಯ ಜೊತೆ ನಾನು ಈ ಮೇಲೆ ಹೇಳಿದ ತನಿಖಾ ಸಮಯದಲ್ಲಿ ಪಡೆದ ಮೂಲ

ದಾಖಲೆಗಳನ್ನು ಸಹ ಪೊಲೀಸರಿಗೆ ಕೊಟ್ಟಿರುತ್ತೇನೆ. ನಾನು ಪೊಲೀಸರಿಗೆ ದೂರು ಕೊಡುವಾಗ ಈ ಮೂಲ ದಾಖಲೆಗಳನ್ನು ಅವರಿಗೆ ಕೊಟ್ಟಿರಲಿಲ್ಲ. ಎಷ್ಟು ದಿನಗಳ ನಂತರ ಈ ದಾಖಲೆಗಳನ್ನು ಪೊಲೀಸರಿಗೆ ಕೊಟ್ಟಿರಿ? ಎಂದರೆ ಸಾಕ್ಷಿಯು ಅವರು ದಿಃ02.02.2016 ರಂದು ಈ ದಾಖಲೆಗಳನ್ನು ಒದಗಿಸಲು ಪತ್ರ ಬರೆದಿದ್ದರು ನಾನು ದಿಃ 15.03.2016 ರಂದು ಸದರಿ ದಾಖಲೆಗಳನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ ನಿಪಿ-7 ಜಪ್ತು ಪಂಚನಾಮೆ ತೋರಿಸಿ, ಅದರಲ್ಲಿ ದಿನಾಂಕ '15' ಎನ್ನುವುದು ತಿದ್ದಲಾಗಿದೆ ಎಂದರೆ ಸಾಕ್ಷಿಯು ಅದನ್ನು ಒಪ್ಪಿರುತ್ತಾರೆ. ಸದರಿ ಪಂಚನಾಮೆ ಬರೆಯುವಾಗ ಪೊಲೀಸರು ಕೇಳಿದ ಪ್ರಶ್ನೆಗಳಿಗೆ ನಾನು ಉತ್ತರಿಸಿರುತ್ತೇನೆ, ಅದರಂತೆ ಪೊಲೀಸರು ಮಾಹಿತಿ ಬರೆದಿರುತ್ತಾರೆ. ಸದರಿ ಪಂಚನಾಮೆಯ ಎಲ್ಲಾ ಪುಟದಲ್ಲಿ ನಾನು ಹಾಗೂ ಪಂಚರು ಸಹಿ ಮಾಡಿಲ್ಲ, ಆದರೆ ಕೊನೆಯ ಪುಟಕ್ಕೆ ಮಾತ್ರ ಸಹಿ ಮಾಡಿರುತ್ತೇವೆ. ನನ್ನ ಸಮಕ್ಷಮ ಪಂಚರು ಸದರಿ ಪಂಚನಾಮೆಯ ಎಲ್ಲಾ ಪುಟಗಳಿಗೆ ಸಹಿ ಮಾಡಿಲ್ಲ, ಕೊನೆಯ ಪುಟಕ್ಕೆ ಮಾತ್ರ ಸಹಿ ಮಾಡಿರುತ್ತಾರೆ. ಸದರಿ ಪಂಚನಾಮೆಯಲ್ಲಿರುವ ಎಲ್ಲಾ ಮಾಹಿತಿಗಳು ನನಗೆ ಈಗ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ದಿಃ15.03.2016 ರಂದು ದಾಖಲೆಗಳನ್ನು ಕೊಟ್ಟಿರುತ್ತೇನೆ ಎಂದು ಹೇಳಿದ್ದು, ಸದರಿ ಎಲ್ಲಾ ದಾಖಲೆಗಳ ಮೇಲೆ ತನಿಖಾಧಿಕಾರಿ ಸಹಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-7 ಪಂಚನಾಮೆ ಜರುಗಿಸಲಾಗಿದೆ ಎಂದು ಹೇಳುವಾಗ ನಾನು ಈ ಮೇಲೆ ಹೇಳಿದಂತೆ ಯಾವುದೇ ದಾಖಲೆಗಳನ್ನು ಪೊಲೀಸರಿಗೆ ಕೊಡದ ಕಾರಣ ಅವರು ಅವುಗಳಿಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-16 ದಾಖಲೆಯನ್ನು ದೃಡೀಕರಿಸಿದವರು ನಮ್ಮ ಬ್ಯಾಂಕಿನ ಶಾಖೆಯ ವ್ಯವಸ್ಥಾಪಕರಾದ ರಘುನಾಥರಾವ್ ಆಗಿರುತ್ತಾರೆ. ಅದೇ ರೀತಿ ನಿಪಿ-17 ರಿಂದ 19 ದಾಖಲೆಗಳನ್ನು ಸದರಿ ವ್ಯಕ್ತಿಯೇ ದೃಢೀಕರಿಸಿರುತ್ತಾರೆ. ನಿಪಿ-16 ರಿಂದ 19 ದಾಖಲೆಗಳ ಮೂಲ ಪ್ರತಿಯನ್ನು ನಾನು ಪೊಲೀಸರಿಗೆ ಕೊಟ್ಟಿಲ್ಲ, ಹಾಗೂ ಅವುಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಸಾಕ್ಷಿಗೆ ನಿಪಿ-25 ದಾಖಲೆಯನ್ನು ತೋರಿಸಿ, ಇದನ್ನು ದೂರು ಕೊಡುವ ಮುನ್ನ ತಯಾರು ಮಾಡಲಾಗಿದೆ ಎಂದರೆ ಸಾಕ್ಷಿ ಅದನ್ನು ಒಪ್ಪಿರುತ್ತಾರೆ. ನನ್ನ ಪ್ರಾಥಮಿಕ ತನಿಖಾ ಸಮಯದಲ್ಲಿ ಸದರಿ ದಾಖಲೆ ನನ್ನ ಗಮನಕ್ಕೆ ಬಂದಿರುತ್ತದೆ. ಸದರಿ ದಾಖಲೆಯನ್ನು ನಾನು ನನ್ನ ಪ್ರಾಥಮಿಕ ತನಿಖಾ ಅವಧಿಯಲ್ಲಿ ಪಡೆದಾಗ ಅದಕ್ಕೆ ನನ್ನ ಸಹಿ ಮಾಡಿಲ್ಲ. ನನ್ನ ಪ್ರಾಥಮಿಕ ತನಿಖಾ ಅವಧಿಯಲ್ಲಿ ಈ ದಾಖಲೆ ನನ್ನ ಗಮನಕ್ಕೆ

ಬಂದ ಬಗ್ಗೆ ಎಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನಮ್ಮ ಬ್ಯಾಂಕಿನ ಅಧಿಕಾರಿಗಳು ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನಾನು ಪೊಲೀಸರಿಗೆ ಕೊಟ್ಟಂತೆ ಅದರಲ್ಲಿ ತನಿಖಾಧಿಕಾರಿಯ ಸಹಿ ಇಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ನಾನು ಪೊಲೀಸರಿಗೆ ಕೊಡದ ಕಾರಣ ಅದರಲ್ಲಿ ಅವರ ಸಹಿ ಇಲ್ಲ ಹಾಗೂ ಅದರ ಬಗ್ಗೆ ತಮ್ಮ ಕಡತದಲ್ಲಿ ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ನಾನು ದೂರು ಕೊಡುವ ಸಮಯದಲ್ಲಿ ಈ ದಾಖಲೆಯ ಬಗ್ಗೆ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ದೂರು ಕೊಡುವ ಸಮಯದಲ್ಲಿ ಈ ದಾಖಲೆ ನಿಮ್ಮ ಸ್ವಾಧೀನದಲ್ಲಿತ್ತು ಎಂದರೆ ಸಾಕ್ಷಿಯು ನಾನು ಈ ದಾಖಲೆಯನ್ನು ದೂರಿನ ಜೊತೆ ಲಗತ್ತಿಸಿ, ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆ ನಾನು ದೂರು ಕೊಡುವ ಸಮಯದಲ್ಲಿ ನನ್ನ ಸ್ವಾಧೀನದಲ್ಲಿರಲಿಲ್ಲ, ಹೀಗಿರುವಾಗ ಅದನ್ನು ದೂರಿನ ಜೊತೆ ಲಗತ್ತಿಸಿ, ಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-7 ಜಪ್ತು ಪಂಚನಾಮೆ ಜೊತೆ ನಾನು ಕೆಲವು ದಾಖಲೆಗಳನ್ನು ಕೊಟ್ಟಿರುತ್ತೇನೆ ಎಂದು ಹೇಳಿದ್ದು, ಸದರಿ ದಾಖಲೆಗಳಿಗೆ ತನಿಖಾಧಿಕಾರಿ ಸಹಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು, ಆಗಲೇ ದಾಖಲೆಗಳ ಪಟ್ಟಿಗೆ ಸಹಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ನಿಪಿ-3 ರಿಂದ 6 ರ ಪೋಟೋಗಳಲ್ಲಿ ನಾನು ಹಾಜರುಪಡಿಸಿರುತ್ತೇನೆ ಎಂದು ಹೇಳಲಾದ ದಾಖಲೆಗಳು ಕಾಣುವುದಿಲ್ಲ ಎಂದರೆ ಸರಿ. ಸದರಿ ಪೋಟೋಗಳನ್ನು ದಿಃ 25.01.2016 ರಂದು ತೆಗೆಯಲಾಗಿದೆ. ನಿಪಿ-7 ರ ಪಂಚನಾಮೆ ಜರುಗಿಸುವ ಸಮಯದಲ್ಲಿ ಪೊಲೀಸರು ಯಾವುದೇ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಸದರಿ ಪೋಟೋಗಳಿಗೆ ಪಂಚರ ಹಾಗೂ ನನ್ನ ಸಹಿಗಳನ್ನು ಪೊಲೀಸರು ತೆಗೆದುಕೊಂಡಿಲ್ಲ. ಪೊಲೀಸರು ಸ್ಥಳಕ್ಕೆ ಬಂದು ಪಂಚನಾಮೆ ಜರುಗಿಸಿದ್ದರು ಎಂದು ಹೇಳಿದ್ದು ಸುಳ್ಳು ಎಂದರೆ ಸರಿಯಲ್ಲ. ಜಿ ಎಸ್ ಅಂಗಡಿ ಹಾಗೂ ಮಂಜುನಾಥ ಎನ್ನುವವರಿಗೆ ನಾನುಹೇಳಿದ ಮಾಹಿತಿಯನ್ನು ಪೊಲೀಸರು ತಿಳಿಸಿ ನಿಪಿ-2 ಪಂಚನಾಮೆಯನ್ನು ಜರುಗಿಸಿರುತ್ತಾರೆ. ಆ ಸಮಯದಲ್ಲಿ ಪೋಟೋಗಳನ್ನು ತೆಗೆದ ಬಗ್ಗೆ ಪಂಚನಾಮೆಯಲ್ಲಿ ನಮೂದು ಮಾಡಿಲ್ಲ. ನಿಪಿ-10 ಪಂಚನಾಮೆಯ ಎಲ್ಲಾ ಪುಟಗಳಿಗೆ ನಾನು ಹಾಗೂ ಪಂಚರು ಸಹಿ ಮಾಡಿಲ್ಲ, ಕೊನೆಯ ಪುಟಕ್ಕೆ ಸಹಿ ಮಾಡಿರುತ್ತೇವೆ. ಅದರಲ್ಲಿ ಬರೆದ ಮಾಹಿತಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿ ಈ ಪ್ರಕರಣದಲ್ಲಿ ಹೇಳಿದಂತೆ ಯಾವುದೇ ಹಣದ ದುರುಪಯೋಗ ಮಾಡಿಲ್ಲದಿದ್ದರೂ, ನಮ್ಮ ಬ್ಯಾಂಕಿನ ಅಧಿಕಾರಿಗಳಿಂದ ಆದ ತಪ್ಪನ್ನು ಮುಚ್ಚಿ ಹಾಕಲು ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಸಾಕ್ಷ್ಯದಾರಗಳು ಆರೋಪಿ ವಿರುದ್ಧ ಇದೆ ಎಂದು ನುಡಿಯುತ್ತಾರೆ. ನಮ್ಮ ಬ್ಯಾಂಕಿನ ಪ್ರತಿಷ್ಟೆ ಕಾಪಾಡಿಕೊಳ್ಳಲು ನಮ್ಮ ಬ್ಯಾಂಕಿನ ಅಧಿಕಾರಿಗಳೇ ಹಣವನ್ನು ತುಂಬಿ, ಆರೋಪಿ ವಿರುದ್ಧ ಸುಳ್ಳು ಆರೋಪ

ಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರಾಥಮಿಕ ತನಿಖೆ ಮಾಡಲು ಹಾಗೂ ದೂರು ನೀಡಲು ನನಗೆ ಯಾವುದೇ ಅಧಿಕಾರ ಇರದೇ ಇದ್ದರೂ ನಾನು ಈ ರೀತಿ ಸುಳ್ಳು ತನಿಖೆ ನಡೆಸಿ, ಸುಳ್ಳುದೂರು ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ದಾಖಲೆಗಳನ್ನು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಯಾವುದೇ ತಪ್ಪು ಇರದೇ ಇದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.